KADG310000462009

Presented on : 21-12-2009
Registered on : 21-12-2009
Decided on : --
Duration :

IN THE COURT OF
SENIOR CIVIL JUDGE AND JMFC AT HARIHAR,DAVANGERE
Presided Over by SMT SHARADADEVI C HATTI

EX/71/2009

ದಿನಾಂಕ 25ನೇ ಫೆಬ್ರವರಿ - 2022

ಡಿಕ್ರಿ ಹೋಲ್ಡರ್‌:- ಶ್ರೀಮತಿ ಹಾಲಮ್ಮ
ಕೋಂ ಲೇಟ್ ಕಣ್ಣಾವರ
ಹನುಮಂತಪ್ಪ,
ವಯಸ್ಸು 57 ವರ್ಷ,
ವ್ಯವಸಾಯ ವೃತ್ತಿ,
ವಾಸಃ ದೊಡ್ಡಿಬೀದಿ,
ಹರಿಹರ.

(ಡಿಕ್ರಿದಾರರ ಪರ ವಕೀಲರು - ಶ್ರೀ ಬಿ.ಹೆಚ್.)

-:: ವಿರುದ್ಧ ::-

ತೀರ್ಪು ಋಣಿಗಳು:- 1. ಯಲ್ಲಮ್ಮ
ಕೋಂ ಲೇಟ್ ಕಣ್ಣಾವರ ಕೆಂಚಪ್ಪ,
ವಯಸ್ಸು 59 ವರ್ಷ,
ವಾಸ ದೊಡ್ಡಿಬೀದಿ,
ಹರಿಹರ.

2. ಸೌಭಾಗ್ಯ
ಕೋಂ ಲೇಟ್ ರಾಮಚಂದ್ರಪ್ಪ,
ವಯಸ್ಸು 43 ವರ್ಷ,
ವಾಸ ದೊಡ್ಡಿಬೀದಿ,
ಹರಿಹರ.

3. ನಿರ್ಮಲ
ಕೋಂ ಷಣ್ಮುಖಪ್ಪ,
ವಯಸ್ಸು 40 ವರ್ಷ,
ವಾಸ ಎಂ.ಸಿ.ಸಿ. ಎ ಬ್ಲಾಕ್,
ರಾಮಕೃಷ್ಣ ಆಶ್ರಮದ ಹಿಂಭಾಗ,
ದಾವಣಗೆರೆ.

4. ಶ್ರೀಮತಿ ಗೀತಾ
ಕೋಂ ಕಾಮರಾಜು,
ವಯಸ್ಸು 38 ವರ್ಷ,
ವಾಸ ಹೆಚ್.ಕೆ.ಆರ್. ವೃತ್ತ,
ಸಿದ್ದಗಂಗಾ ಶಾಲೆ ಹಿಂಭಾಗ,
ಸಿದ್ದರಾಮೇಶ್ವರ ಬಡಾವಣೆ,
ದಾವಣಗೆರೆ.

5. ಮಂಜುಳ
ಬಿನ್ ಲೇಟ್ ಕೆಂಚಪ್ಪ,
ಕೋಂ ರಮೇಶ್,
ವಯಸ್ಸು 36 ವರ್ಷ,
ವಾಸ ಹೆಚ್.ಕೆ.ಆರ್. ವೃತ್ತ,
ಸಿದ್ದಗಂಗಾ ಶಾಲೆ ಹಿಂಭಾಗ,
ಸಿದ್ದರಾಮೇಶ್ವರ ಬಡಾವಣೆ,
ದಾವಣಗೆರೆ.

6. ಬೀರೇಶ್
ಬಿನ್ ಕೆಂಚಪ್ಪ,
ವಯಸ್ಸು 32 ವರ್ಷ,
ವಾಸ ಕೇರ್ ಆಫ್ ನಿರ್ಮಲ
ಕೋಂ ಷಣ್ಮುಖಪ್ಪ,
ವಯಸ್ಸು 40 ವರ್ಷ,

ವಾಸ ಎಂ.ಸಿ.ಸಿ. ಎ ಬ್ಲಾಕ್,
ರಾಮಕೃಷ್ಣ ಆಶ್ರಮದ ಹಿಂಭಾಗ,
ದಾವಣಗೆರೆ.

7. ಬಸವರಾಜಪ್ಪ
ಬಿನ್ ಲೇಟ್ ಕಣ್ಣಾವರ ಬೀರಪ್ಪ,
ವಯಸ್ಸು 40 ವರ್ಷ,
ಶಾಮನೂರು
ಶಿವಶಂಕರಪ್ಪನವರ ಮನೆಯ
ಕಾವಲುಗಾರ,
ದಾವಣಗೆರೆ.

8. ನಾಗಮ್ಮ
ಕೋಂ ಅಡಿವಪ್ಪ ಬಣಕಾರ,
ವಯಸ್ಸು 61 ವರ್ಷ,
(ಮೃತರಾಗಿರುತ್ತಾರೆ)
ಇವರ ವಾರಸುದಾರರು

8(ಎ). ನಾಗರಾಜ
ಬಿನ್ ಅಡಿವೆಪ್ಪ ಬಣಕಾರ,
ವಯಸ್ಸು 23 ವರ್ಷ,

8(ಬಿ). ರಾಜಪ್ಪ
ಬಿನ್ ಅಡಿವೆಪ್ಪ ಬಣಕಾರ,
ವಯಸ್ಸು 21 ವರ್ಷ,

ಇಬ್ಬರ ವಾಸ ಮಾಲಕನಹಳ್ಳಿ ಗ್ರಾಮ,
ರಾಣಿಬೆನ್ನೂರು ತಾಲ್ಲೂಕು,
ಹಾವೇರಿ ಜಿಲ್ಲೆ.

9. ಕಣ್ಣಮ್ಮ
ಕೋಂ ಹುಲಿಕಟ್ಟಿ ಬೀರಪ್ಪ,
ಬಿನ್ ಕಣ್ಣಾವರ ಬೀರಪ್ಪ,
ವಯಸ್ಸು 60 ವರ್ಷ,
ವಾಸ ದೊಡ್ಡಿಬೀದಿ,
ಹರಿಹರ.

10. ಹನುಮಕ್ಕ
ಕೋಂ ಬಂಡ್ರಿ ಚಂದ್ರಪ್ಪ,
ಬಿನ್ ಕಣ್ಣಾವರ ಬೀರಪ್ಪ,
ವಯಸ್ಸು 56 ವರ್ಷ,
ವಾಸ ಚೇತನ ಹೋಟೆಲ್ ಎದುರು,
ಪಿ.ಜೆ.ಬಡಾವಣೆ,
ದಾವಣಗೆರೆ.

11. ಜಯಮ್ಮ
ಕೋಂ ಬಸವರಾಜಪ್ಪ,
ವಯಸ್ಸು 30 ವರ್ಷ,
ವಾಸ ದೊಡ್ಡೀಬೀದಿ,
ಹರಿಹರ.

12. ಚಂದ್ರಪ್ಪ
ಬಿನ್ ಬಸವರಾಜಪ್ಪ,
ವಯಸ್ಸು 30 ವರ್ಷ,
ಕೆ.ಎಸ್.ಆರ್.ಟಿ.ಸಿ. ಬಸ್ ಡ್ರೈವರ,
ವಾಸ ಹಳಿವನ ಗ್ರಾಮ,
ಹರಿಹರ.

13. ಕೆ.ಬಸವರಾಜಪ್ಪ
ಬಿನ್ ನಾಗಪ್ಪ,
ವಯಸ್ಸು 55 ವರ್ಷ,
ಕೂಲಿ ಕೆಲಸ,
ವಾಸ ಹಳಿವನ ಗ್ರಾಮ,
ಹರಿಹರ ತಾಲ್ಲೂಕು.

14. ಮಾರುತಿ
ಬಿನ್ ರಾಗಿ ಕರಿಯಪ್ಪ,
ವಯಸ್ಸು 28 ವರ್ಷ,
ವಾಸ ದೀಟೂರ್ ಗ್ರಾಮ,
ಹರಿಹರ ತಾಲ್ಲೂಕು.
(ಮೃತಪಟ್ಟಿರುತ್ತಾರೆ)

14(ಎ) ಪರಶುರಾಮಪ್ಪ
ಬಿನ್ ಲೇಟ್ ರಾಗಿ ಕರಿಯಪ್ಪ,
ವಯಸ್ಸು 35 ವರ್ಷ,

14(ಬಿ) ಬೀರೇಶ್
ಬಿನ್ ಲೇಟ್ ರಾಗಿ ಕರಿಯಪ್ಪ,
ವಯಸ್ಸು 26 ವರ್ಷ,

ಇಬ್ಬರು ವ್ಯವಸಾಯಗಾರರು,
ವಾಸ ದೀಟೂರ್ ಗ್ರಾಮ,
ಹರಿಹರ ತಾಲ್ಲೂಕು.

15. ರುದ್ರಮ್ಮ
ಕೋಂ ಸಹದೇವಪ್ಪ,
ವಯಸ್ಸು 38 ವರ್ಷ,
ಕೇರ್ ಆಫ್ ತಿಪ್ಪೆಲರ ಸಹದೇವಪ್ಪ,
ವಾಸ ಹಳಿವನಗ್ರಾಮ,
ಹರಿಹರ ತಾಲ್ಲೂಕು.

16. ಸಿದ್ದಮ್ಮ
ಕೋಂ ಶೇಖರಪ್ಪ,
ವಾಸ ಚಿರಸ್ತನಹಳ್ಳಿ ಗ್ರಾಮ,
ಹರಪನಹಳ್ಳಿ ತಾಲ್ಲೂಕು.

(1, 2, 5, 8(ಎ,ಬಿ), 9, 12, 14(ಎ,ಬಿ), 15ನೇ ತೀರ್ಪುಋಣಿದಾರು
ಗೈರುರಾಜರಾಗಿರುತ್ತಾರೆ.)
(3, 4, 6 ಮತ್ತು 7ನೇ ತೀರ್ಪುಋಣಿದಾರರ ಪರ ವಕೀಲರು -
ಶ್ರೀ ಎಂ.ಎನ್.ಶ್ರೀ ಹೆಚ್.ವಿ.ಆರ್.)
(10ನೇ ತೀರ್ಪುಋಣಿದಾರರ ಪರ ವಕೀಲರು -
ಶ್ರೀ ಎಸ್.ಜಿ.ಎ.)

ಮಧ್ಯಂತರ ಅರ್ಜಿ ಸಂಖ್ಯೆ - 6

ಅಬ್ಜೆಕ್ಟರ್/ಅರ್ಜಿದಾರರು 1. ಗಣೇಶ್ ಬಿ.ಎಸ್.
ಬಿನ್ ಬಿ.ಜಿ.ಶಿವರಾಜ,

ವಯಸ್ಸು 34 ವರ್ಷ,
ವಕೀಲರ ವೃತ್ತಿ,
ವಾಸ ಹಂಸಾಗಾರ್ ಕಾಂಪೌಂಡ್,
ಯಂತ್ರಾಪುರ ಅಂಚೆ,
ಹರಿಹರ.

(ಅಬ್ಜೆಕ್ಟರ್ ರ ಪರ ವಕೀಲರು -ಶ್ರೀ ಕೆ.ಎಸ್.ಐ.)

ವಿರುದ್ಧ

ಡಿಕ್ರಿದಾರರು/ಎದುರುದಾರರು: ಹಾಲಮ್ಮ ಮತ್ತು ಇತರರು

-:: ಮಧ್ಯಂತರ ಅರ್ಜಿ ಸಂಖ್ಯೆ - 6 ರ ಮೇಲೆ ಆದೇಶ ::-

ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ನಿಯಮ 99 ರಿಂದ 101 ಸಹ ಕಲಂ 47 ಮತ್ತು 151 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಪ್ರಮಾಣಪತ್ರದಲ್ಲಿ ಹೇಳಿದ ಕಾರಣಗಳಿಂದಾಗಿ ಅರ್ಜಿಯಲ್ಲಿ ತೋರಿಸಿದ ಐಟಂ ನಂ.2ರ ಸ್ವಾಧೀನತಾ ವಾರೆಂಟನ್ನು ತಳ್ಳಿ ಹಾಕಿ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿದ್ದಾರೆ.

2. ಅರ್ಜಿದಾರ/ಅಬ್ಜೆಕ್ಟರ್ ಗಣೇಶ್ ಬಿ.ಎಸ್. ಎನ್ನುವವರು ಪ್ರಮಾಣ ಪತ್ರವನ್ನು ಸಲ್ಲಿಸಿ, ಅರ್ಜಿಯಲ್ಲಿ ತೋರಿಸಿದ ನಿವೇಶನಗಳನ್ನು ದಿಃ02/06/2009 ರಂದು ಖರೀದಿಸಿ ಸದರಿ ಆಸ್ತಿಗಳ ಸ್ವಾಧೀನಾನುಭವದಲ್ಲಿದ್ದೇನೆಂದು ಹೇಳಿದ್ದಾರೆ. ಸದರಿ ಆಸ್ತಿಗಳು ಹರ್ಲಾಪುರ ಗ್ರಾಮದ ಸ.ನಂ.32/ಪಿ ಕ್ಷೇತ್ರ 1 ಎಕರೆ 20 ಗುಂಟೆ ಜಮೀನನನ್ನು ಅರ್ಜಿದಾರರ ತಂದೆ, ಸೈಯದ್ ಸಬ್ಜಾನ್ ಸಾಬ್, ಸೈಯದ್ ಸುಬಾನ್ ಸಾಬ್ ಹಾಗೂ ಸೈಯದ್ ಅಮನುಲ್ಲಾ ಎನ್ನುವವರು ದಿಃ26/08/1980 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದು, ಆ ಮೇರೆಗೆ ಖಾತಾ ವರ್ಗಾವಣೆಯಾಗಿರುತ್ತದೆ. ಸದರಿ ಜಮೀನನ್ನು ಭೂಪರಿವರ್ತನೆಗೆ ಅರ್ಜಿ ಸಲ್ಲಿಸಿದ ಮೇರೆಗೆ ದಿಃ21/06/1985 ರಂದು ಭೂ ಪರಿವರ್ತನೆಗೆ ಆದೇಶವಾಗಿದ್ದು, ಆ ಮೇರೆಗೆ ಹರಿಹರ ಪುರಸಭೆಯಲ್ಲಿ ಖಾತಾ ವರ್ಗಾವಣೆಯಾಗಿರುತ್ತದೆ. ಸದರಿ ಜಮೀನಿನಲ್ಲಿ ಒಟ್ಟು 33 ನಿವೇಶನಗಳಾಗಿ ಭೂಪರಿವರ್ತನೆಯಾಗಿದ್ದು, ಸ.ನಂ.32/ಪಿ ಕ್ಷೇತ್ರ 1 ಎಕರೆ 20 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ಉಳಿದ ಜಮೀನು, ಪಶ್ಚಿಮಕ್ಕೆ

ಮೈಸೂರು ಕಿರ್ಲೋಸ್ಕರ್ ಕಂಪನಿಯ ಶಿಕ್ಷಣ ಸಂಸ್ಥೆ, ಉತ್ತರಕ್ಕೆ ಬೀರಪ್ಪ ತಂದೆ ಕರಿಗೋವಿಂದಪ್ಪ, ದಕ್ಷಿಣಕ್ಕೆ ನಾಗಪ್ಪ ಎನ್ನುವವರ ಜಮೀನು, ಅರ್ಜಿದಾರರು ಮೂಲ ದಾವೆ ನಂ.77/1995 ರಲ್ಲಾಗಲೀ, ಎಫ್.ಡಿ.ಪಿ.ನಂ.18/2002 ರಲ್ಲಿ ಆಗಲೀ ಪಕ್ಷಗಾರರಾಗಿರುವುದಿಲ್ಲ. ಡಿಕ್ರಿದಾರರು ವಾಸ್ತವ ಸಂಗತಿಗಳನ್ನು ಮರೆಮಾಚಿ ಡಿಕ್ರಿ ಪಡೆದುಕೊಂಡಿದ್ದಾರೆ. ದಿ:26/08/1980 ರಂದು ಕ್ರಯಪತ್ರವಾದಾಗಿನಿಂದ ಖರೀದಿದಾರರು ತಮ್ಮ ಹೆಸರಿನಲ್ಲಿ ಖಾತೆಯನ್ನು ಹೊಂದಿ ಸ್ವಾಧೀನಾನುಭವದಲ್ಲಿದ್ದಾರೆ. ಇತ್ತೀಚೆಗೆ ಡಿಕ್ರಿದಾರರು ಸರ್ವೆ ನಂ.32/ಪಿ ಕ್ಷೇತ್ರ 1 ಎಕರೆ 5 ಗುಂಟೆ ಜಮೀನಿನ ಸ್ವಾಧೀನತೆಯನ್ನು ಪಡೆಯಲು ಬಂದಾಗ ಸದರಿ ಪ್ರಕರಣಗಳ ಬಗ್ಗೆ ಮಾಹಿತಿ ಗೊತ್ತಾಗಿರುತ್ತದೆ. ಆದ್ದರಿಂದ ಅರ್ಜಿಯ ಐಟಂ ನಂ.2 ಆಸ್ತಿಯ ಕುರಿತು ಹೊರಡಿಸಿದ ಸ್ವಾಧೀನತಾ ವಾರೆಂಟನ್ನು ರದ್ದುಗೊಳಿಸಬೇಕೆಂದು ಪ್ರಾರ್ಥಿಸಿದ್ದಾರೆ.

3. ಎದುರುದಾರರು/ಡಿಕ್ರಿದಾರರ ಮಧ್ಯಂತರ ಅರ್ಜಿ ಸಂಖ್ಯೆ-6 ಕ್ಕೆ ತಕರಾರುಗಳನ್ನು ಸಲ್ಲಿಸಿ ಅರ್ಜಿಯ ಎಲ್ಲಾ ವಿವರಗಳನ್ನು ಅಲ್ಲಗಳೆದಿರುತ್ತಾರೆ. ಅರ್ಜಿಯಲ್ಲಿ ತೋರಿಸಿದ ಐಟಂ ನಂ.2 ಹರ್ಲಾಪುರ ಗ್ರಾಮದ ಸ.ನಂ.32/ಪಿ ಕ್ಷೇತ್ರ 4 ಎಕರೆ 5 ಗುಂಟೆ ಜಮೀನಿನ ಪೈಕಿ 1 ಎಕರೆ 5 ಗುಂಟೆ ಜಮೀನಿನ ಕುರಿತು ಮೂಲ ದಾವಾ ನಂ.77/1997 ರಲ್ಲಿ ಡಿಕ್ರಿಯಾಗಿದ್ದು, ಆ ಮೇರೆಗೆ ಡಿಕ್ರಿದಾರರು ಎಪ..ಡಿ.ಪಿ..ನಂ.18/2002 ರಡಿ ಪ್ರಕರಣವನ್ನು ದಾಖಲಿಸಿ ಅಂತಿಮ ಡಿಕ್ರಿಯನ್ನು ಪಡೆದುಕೊಂಡಿರುತ್ತಾರೆ. ಆ ಮೇರೆಗೆ ನ್ಯಾಯಾಲಯ ಸ್ವಾಧೀನತೆಯನ್ನು ಕೊಡಿಸಿದ್ದರಿಂದ ಅರ್ಜಿಯು ಊರ್ಜಿತವಾಗುವುದಿಲ್ಲ. ಅರ್ಜಿಯ ಐಟಂ ನಂ.2 ಕ್ಕೆ ಡಿಕ್ರಿದಾರರು ಸಂಪೂರ್ಣ ಮಾಲೀಕತ್ವ ಮತ್ತು ಸ್ವಾಧೀನತೆಯನ್ನು ಹೊಂದಿದ್ದಾರೆ ಮತ್ತು ಅರ್ಜಿದಾರರು ಹಾಜರುಪಡಿಸಿದ ಕ್ರಯಪತ್ರ ಮತ್ತು ಎಲ್ಲಾ ದಾಖಲೆಗಳನ್ನು ಅಲ್ಲಗಳೆದಿರುತ್ತಾರೆ.

4. ಬೀರಪ್ಪ, ನಾಗಪ್ಪ, ಬಸಪ್ಪ ಮತ್ತು ಕೆಂಚಪ್ಪ ಎನ್ನುವವರು ಕಣ್ಣಾವರ ಸಿದ್ದಪ್ಪ ಎನ್ನುವವರ ಮಕ್ಕಳಾಗಿದ್ದು, ಸದರಿಯವರು ತಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು

ದಿಃ22/08/1974 ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ. ಬೀರಪ್ಪ ಎನ್ನುವವರಿಗೆ ಮೂರು ಜನ ಗಂಡುಮಕ್ಕಳು ಮತ್ತು 7 ಜನ ಹೆಣ್ಣುಮಕ್ಕಳಿದ್ದು, ಹನುಮಂತಪ್ಪ ಎನ್ನುವವರು ಡಿಕ್ರಿದಾರರ ಗಂಡನಿರುತ್ತಾನೆ. ಸದರಿಯವರು 1980 ರಲ್ಲಿ ಮೃತರಾಗಿದ್ದು, ಡಿಕ್ರಿದಾರರು ಆಕೆಯ ಗಂಡನ ವಾರಸುದಾರಳಾಗಿ ದಿಃ22/08/1974 ರಂದು ಬೀರಪ್ಪ ಎನ್ನುವವರಿಗೆ ವಿಭಾಗದ ಮೂಲಕ ಬಂದ ಆಸ್ತಿಗಳನ್ನು ಕ್ಲೇಮ್ ಮಾಡಿ ದಿಃ 22/04/1995 ರಂದು ಮೂಲ ದಾವಾನಂ.75/1995 ನ್ನು ದಾವಣಗೆರೆಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವಾ ದಾಖಲಿಸಿದ್ದಾರೆ. ಬೀರಪ್ಪ ಎನ್ನುವವರು ದಿಃ23/06/1995 ರಂದು ಅನಂತ್ ರಾಜ್ ಪಾಟೀಲ್ ಎನ್ನುವವರಿಗೆ ಬರೆದುಕೊಟ್ಟ ಕ್ರಯಪತ್ರವು ಮೂಲ ದಾವಾ ನಂ.77/1995 ದಾವಾ ದಾಖಲಿಸಿದ ನಂತರ ಆಗಿರುವುದರಿಂದ ಬೀರಪ್ಪನಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇರುವುದಿಲ್ಲ. ಸದರಿ ಆಸ್ತಿ ಬೀರಪ್ಪನ ಸ್ವಯಾರ್ಜಿತ ಆಸ್ತಿಯಾಗಿರುವುದಿಲ್ಲ. ಆದ್ದರಿಂದ ಅನಂತರಾಜ್ ಪಾಟೀಲ್ ಎನ್ನುವವರಿಗೆ ಯಾವುದೇ ಮಾಲೀಕತ್ವದ ಹಕ್ಕು ಪ್ರಾಪ್ತವಾಗಿರುವುದಿಲ್ಲ, ಅದೇ ರೀತಿ ಉಳಿದ ಖರೀದಿದಾರರಿಗೂ ಸಹ ಯಾವುದೇ ಹಕ್ಕು ಪ್ರಾಪ್ತವಾಗಿರುವುದಿಲ್ಲ. ದಿಃ26/08/1980 ಮತ್ತು 02/06/2009 ರಂದು ಆದ ಕ್ರಯಪತ್ರಗಳು ಡಿಕ್ರಿದಾರರಿಗೆ ಯಾವುದೇ ರೀತಿಯ ಬಂಧನಕಾರಿಯಾಗುವುದಿಲ್ಲ. ಮೂಲ ದಾವೆ ನಂ.77/1995, ದಿಃ26/05/2000 ರಂದು ಡಿಕ್ರಿಯಾಗಿದ್ದು, ಆ ಮೇರೆಗೆ ಎಫ್.ಡಿ.ಪಿ.ನಂ.18/2002 ರ ಅಂತಿಮ ಡಿಕ್ರಿಯಾಗಿದ್ದು, ಆ ಮೇರೆಗೆ ಡಿಕ್ರಿದಾರರು ಸ್ವಾಧೀನತೆಯನ್ನು ಪಡೆದುಕೊಂಡಿದ್ದಾರೆ, ಆದ್ದರಿಂದ ಅರ್ಜಿದಾರರು ಸಲ್ಲಿಸಿದ ಮಧ್ಯಂತರ ಅರ್ಜಿ ನಂ.6 ಊರ್ಜಿತವಾಗುವುದಿಲ್ಲವೆಂದು ಖರ್ಚು ಸಹಿತ ವಜಾಗೊಳಿಸುವಂತೆ ಪ್ರಾರ್ಥಿಸಿದ್ದಾರೆ.

5. ಉಭಯಪಕ್ಷಗಾರರ ಪರ ವಕೀಲರ ವಾದ ವಿವಾದವನ್ನು ಆಲಿಸಲಾಯಿತು.

6. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 ಅರ್ಜಿದಾರರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ-6 ರಲ್ಲಿ ಕೋರಿರುವಂತೆ ಅರ್ಜಿಯ ಐಟಂ ನಂ.2ರಲ್ಲಿ

ನಿವೇಶನ ಸಂಖ್ಯೆ:17 ಹಾಗೂ 21 ರಲ್ಲಿ ಕಾನೂನು-ಬದ್ಧ ಮಾಲೀಕತ್ವದ ಹಕ್ಕು ಮತ್ತು ಸ್ವಾಧೀನವನ್ನು ಹೊಂದಿದ್ದಾರೆಂದು ಸಾಬೀತುಪಡಿಸುವರೇ?

ಅಂಶ. 2 ಯಾವ ಆದೇಶ?

7. ಅರ್ಜಿಯಲ್ಲಿ ಹೇಳಿದ ಸಂಗತಿಗಳನ್ನು ಸಾಬೀತುಪಡಿಸಲು ಅರ್ಜಿದಾರರಾದ ಗಣೇಶ್ ಎನ್ನುವವರು ತಮ್ಮನ್ನು ಪಿ.ಡಬ್ಲೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ತಮ್ಮ ಪರವಾಗಿ ದಾಖಲೆಗಳನ್ನು ಹಾಜರುಪಡಿಸಿ ನಿಶಾನೆ ಪಿ.1 ರಿಂದ 12 ಹಾಗೂ ನಿಪಿ.37 ರಿಂದ 40 ಎಂದು ಗುರುತಿಸಿಕೊಂಡಿದ್ದಾರೆ.

8. ಡಿಕ್ರಿದಾರರು ತಮ್ಮ ತಕರಾರಿನಲ್ಲಿ ಹೇಳಿದ ಸಂಗತಿಗಳನ್ನು ಸಾಬೀತುಪಡಿಸಲು ತನ್ನನ್ನು ಆರ್.ಡಬ್ಲು.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ನಿಆರ್..1 ರಿಂದ 39 ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿದ್ದಾರೆ. ತಮ್ಮ ಪರವಾಗಿ ರಾಮಪ್ಪ ಪೊಲೀಸ್ ಪೇದೆ, ಓಂಕಾರಪ್ಪ ನ್ಯಾಯಾಲಯದ ಅಮೀನರು, ಶ್ರೀನಿವಾಸ್ ಎನ್.ಜಿ. ತಾಲ್ಲೂಕು ಸರ್ವೆಯರ್ ಎನ್ನುವವರನ್ನು ಆರ್.ಡಬ್ಲೂ.2 ರಿಂದ 4 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದಾರೆ.

9. ಅರ್ಜಿ, ತಕರಾರು ಮತ್ತು ಉಭಯ ಪಕ್ಷಗಾರರ ಪರ ಇರುವಂತಹ ಮೌಖಿಕ ಸಾಕ್ಷಿ ಹಾಗೂ ದಾಖಲಾತಿ ಸಾಕ್ಷಿಗಳನ್ನು ಮತ್ತು ಈ ಕೇಸಿನ ವಸ್ತು ಸ್ಥಿತಿ ಸಂದರ್ಭಗಳನ್ನು ಪರಿಶೀಲಿಸಿ ಮೇಲಿನ ವಿವಾದಾಂಶಕ್ಕೆ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ:-.

10. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ:-

ಅಂಶ-1 - ಸಕಾರಾತ್ಮಕ

ಅಂಶ-2 - ಅಂತಿಮ ಆದೇಶದಂತೆ:

-:: <u>ಕಾರಣಗಳು</u> ::-

11. <u>ಅಂಶ-1</u> - ಡಿಕ್ರಿದಾರರು ತೀರ್ಪುಋಣಿಗಳ ವಿರುದ್ಧ ಮೂಲ ದಾವಾ ನಂ.77/1995 ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯು ದಿಃ26/05/2000 ರಂದು ಭಾಗಶಃ ಡಿಕ್ರಿಯಾಗಿರುತ್ತದೆ. ಸದರಿ ಆದೇಶದ ಮೇರೆಗೆ ಡಿಕ್ರಿದಾರರು ಎಫ್..ಡಿ.ಪಿ.ನಂ.18/2002 ನ್ನು ದಾಖಲಿಸಿದ್ದು, ಆ ಮೇರೆಗೆ ದಿಃ21/09/2005 ರಂದು ಅಂತಿಮ ಡಿಕ್ರಿಯಾಗಿರುತ್ತದೆ. ಸದರಿ ಅಂತಿಮ ಡಿಕ್ರಿಯ ಪ್ರಕಾರ ಡಿಕ್ರಿದಾರರಿಗೆ ದಾವಾ ಆಸ್ತಿಗಳಲ್ಲಿ 11/40 ಭಾಗಂಶದ ಹಕ್ಕು ಇದೆ ಎಂದು ಆದೇಶವಾಗಿದ್ದು, ಆ ಮೇರೆಗೆ ಡಿಕ್ರಿದಾರರ ಅಂತಿಮ ಡಿಕ್ರಿಯ ಪ್ರಕಾರ ತನ್ನ ಹಿಸ್ಸೆಯ ಬಾಬ್ತು ಆಸ್ತಿಗಳ ಸ್ವಾಧೀನ ಕೊಡಿಸಬೇಕೆಂದು ಪ್ರಸ್ತುತ ದರಖಾಸ್ತ ಅರ್ಜಿಯನ್ನು ಸಲ್ಲಿಸಿದಾಗ, ನ್ಯಾಯಾಲಯದ ಕಮೀಷನರ್ ತಾಲ್ಲೂಕು ಸರ್ವೆಯರ್ ರವರು ದಾವಾ ಸರ್ವೆ ನಂ.32/ಪಿ ಕ್ಷೇತ್ರ 4 ಎಕರೆ 5 ಗುಂಟೆ ಜಮೀನಿನ ಸ್ವಾಧೀನ ಕೊಡಿಸಲು ಹೋದಾಗ, ಅರ್ಜಿದಾರರಾದ ಗಣೇಶ್ ಎನ್ನುವವರು ನ್ಯಾಯಾಲಯಕ್ಕೆ ಹಾಜರಾಗಿ ದಾವಾ ಸರ್ವೆ ನಂ.32/ಪಿ ಕ್ಷೇತ್ರ 4 ಎಕರೆ 5 ಗುಂಟೆ ಜಮೀನಿನ ಪೈಕಿ 1 ಎಕರೆ 20 ಗುಂಟೆ ಜಮೀನಿನಲ್ಲಿ ಆದ ನಿವೇಶನಗಳ ಪೈಕಿ ಸೈಟ್ ನಂ.17 ಮತ್ತು 21 ನಿವೇಶನಗಳಲ್ಲಿ ತನಗೆ ಮಾಲೀಕತ್ವದ ಹಕ್ಕು ಮತ್ತು ಸ್ವಾಧೀನತೆ ಹಕ್ಕು ಇದೆ ಎಂದು ಮಧ್ಯಂತರ ಅರ್ಜಿ ನಂ.6 ನ್ನು ಸಲ್ಲಿಸಿದ್ದಾರೆ.

12. ಅರ್ಜಿದಾರರು ಮೂಲ ದಾವಾ ನಂ.77/1995 ರಲ್ಲಿ ಪಕ್ಷಗಾರರಾಗಿರುವುದಿಲ್ಲ. ಆದರೆ ಸ.ನಂ.32/ಪಿ 4 ಎಕರೆ 5 ಗುಂಟೆ ಜಮೀನಿನ ಪಶ್ಚಿಮ ಭಾಗದ 1 ಎಕರೆ 20 ಗುಂಟೆ ಜಮೀನನ್ನು ಡಿಕ್ರಿದಾರರ ಮಾವ ಬೀರಪ್ಪನಿಂದ ಅರ್ಜಿದಾರರ ಮಾರಾಟಗಾರರು ಖರೀದಿಸಿದ್ದಾರೆಂದು ಕ್ಲೈಮ್ ಮಾಡುತ್ತಿದ್ದು, ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.47 ರಡಿಯಲ್ಲಿ ಸ್ವತಂತ್ರವಾಗಿ ವಿವಾದಿತ ಆಸ್ತಿಯನ್ನು ಕ್ಲೈಮ್ ಮಾಡುತ್ತಿರುವ ಪಕ್ಷಗಾರರು ಮೂಲ ದಾವೆಯಲ್ಲಿ ತೀರ್ಮಾನಿಸುವಂತೆ ಮಾಲೀಕತ್ವದ ಹಕ್ಕು ಮತ್ತು ಸ್ವಾಧೀನತೆಯ ಕುರಿತು ಸಾಕ್ಷಿ ವಿಚಾರಣೆಯ ನಂತರ ತೀರ್ಮಾನಿಸಬೇಕೆಂದು ಸ್ಪಷ್ಟವಾಗಿರುವುದರಿಂದ ಚರ್ಚೆಗೆ ಅನುಕೂಲವಾಗುವಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.47 ಹಾಗೂ ಕ್ರಮಾದೇಶ 21

ನಿಯಮ 97, 98, 99, 100, 101 & 103 ಗಳ ವ್ಯಾಖ್ಯಾನಗಳನ್ನು ಪರಿಶೀಲಿಸಲಾಗಿ, ಅವು ಈ ಕೆಳಗಿನಂತಿವೆಃ-

13. Section 47. Questions to be determined by the Court executing decree:—

(1) All questions arising between the parties to the suit in which the decree was passed, or their representatives, and relating to the execution, discharge or satisfaction of the decree, shall be determined by the Court executing the decree and not by a separate suit.

(2) xxx

(3) Where a question arises as to whether any person is or is not the representative of a party, such question shall, for the purposes of this section, be determined by the Court.

[Explanation I: For the purposes of this section, a plaintiff whose suit has been dismissed and a defendant against whom a suit has been dismissed are parties to the suit.

Explanation II: (a) For the purposes of this section, a purchaser of property at a sale in execution of a decree shall be deemed to be a party to the suit in which the decree is passed; and

(b) All questions relating to the delivery of possession of such property to such purchaser or his representative shall be deemed to be questions relating to the execution, discharge or satisfaction of the decree within the meaning of this

section.]

ORDER XXI RULE:

97. Resistance or obstruction to possession of immovable property:—

(1) Where the holder of a decree for the possession of immovable property or the purchaser of any such property sold in execution of a decree is resisted or obstructed by any person in obtaining possession of the property, he may make an application to the Court complaining of such resistance or obstruction.

(2) Where any application is made under sub-rule (1), the Court shall proceed to adjudicate upon the application in accordance with the provisions herein contained.]

98. Orders after adjudication:—

(1) Upon the determination of the questions referred to in rule 101, the Court shall, in accordance with such determination and subject to the provisions of sub-rule (2),—

(2) make an order allowing the application and directing that the applicant be put into the possession of the property or dismissing the application; or

(b) pass such other order as, in the circumstances of the case, it may deem fit.

(2) Where, upon such determination, the Court is satisfied that

the resistance or obstruction was occasioned without any just cause by the judgment-debtor or by some other person at his instigation or on his behalf, or by any transferee, where such transfer was made during the pendency of the suit or execution proceeding, it shall direct that the applicant be put into possession of the property, and where the applicant is still resisted or obstructed in obtaining possession, the court may also, at the instance of the applicant, order the judgment debtor, or any person acting at his instigation or on his behalf, to be detained in the civil prison for a term which may extend to thirty days.

99. Dispossession by decree holder or purchaser:—

(1) Where any person other than the judgment debtor is dispossessed of immovable property by the holder of a decree for the possession of such property or, where such property has been sold in execution of a decree, by the purchaser thereof, he may make an application to the court complaining of such dispossession.

(2) Where any such application is made, the court shall proceed to adjudicate upon the application in accordance with the provisions herein contained.

100. Order to be passed upon application complaining of dispossession:— Upon the determination of the questions referred to in

rule 101, the court shall, in accordance with such determination,—

(a) make an Order allowing the application and directing that the applicant be put into the possession of the property or dismissing the application; or

(b) pass such other Order as, in the circumstances of the case, it may deem fit.

101. Question to be determined.- All questions (including questions relating to right, title or interest in the property) arising between the parties to a proceeding on an application under rule 97 or rule 99 or their representatives, and relevant to the adjudication of the application, shall be determined by the Court dealing with the application, and not by a separate suit and for this purpose, the Court shall, notwithstanding anything to the contrary contained in any other law for the time being in force, be deemed to have jurisdiction to decide such questions.

103. Orders to be treated as decrees.- Where any application has been adjudicated upon under Rule 98 or Rule 100, the Order made thereon shall have the same force and be subject to the same conditions as to an appeal or otherwise as if it were a decree."

- Section 47 mandates all questions arising between the parties to the suit or their representatives shall be determined by the Court executing the decree and not by a separate suit. A third party claiming independent right over the property which is the

subject matter of execution can object and get his claim adjudicated when he is sought to be dispossessed by a decree holder and he need not wait until he is dispossessed. In other words, the objector has to establish the possession over the property from which he is sought to be dispossessed. He need not wait till he is being dispossessed and then file a separate suit. Any person other than the judgment debtor, who is being evicted by execution proceedings has the right of hearing before the Executing Court. All such disputes are to be adjudicated by the Executing Court itself finally under Rule 100 CPC. Thus, possession of the subject property in the hands of the objector is a condition precedent for objecting to the execution proceedings when sought to be dispossessed.

- Perusal of Rule 99 of Order XXI would indicate that a person other than judgment debtor when dispossessed of immovable property by the holder of a decree, has to make an application to the Court complaining of such dispossession for being put in possession of such property. Thus, it would clearly indicate that objector has to plead, prove and establish that he was in possession of the property to which he is or was in possession until dispossessed.
- Rule 101 of Order XXI mandates all questions including questions relating to right, title and interest arising between the parties to a proceeding on an application filed under Rule 97 or

99 or their representatives shall be determined by the Court dealing with such application and not by a separate suit and on such determination, it can make an order directing the applicant/objector to be put into possession of the property or dismiss the application or pass such other orders in the circumstances a case may warrant.

A conspectus reading of Order XXI Rules 97, 98, 99, 100, 101 & 103 would indicate that Executing Court is empowered to adjudicate the right, title, interest claimed in the property arising between the parties to a proceedings or between the decree holder and the person claiming independent right, title and interest and an order is to be made in that behalf by the Executing Court. On such adjudication, it becomes conclusive between the parties and it shall be construed as a decree enabling the aggrieved party to pursue the same in an appeal as if it were decree and such dispute not to be agitated in a separate suit. Prior to 1976 amendment of CPC, right of suit under Order 21 Rule 103 was available which has since been done away by the amendment. Thus, the scheme of code appears to put an end to the protraction of the execution and to shorten the litigation between the parties or persons claiming right, title and interest in the immovable property which is the subject matter of execution.

14. ಮಧ್ಯಂತರ ಅರ್ಜಿ ನಂ.6ರ ಅರ್ಜಿದಾರರಾದ ಗಣೇಶ್ ಎನ್ನುವವರು ತನ್ನನ್ನು ಪಿಡಬ್ಲೂ.1 ಎಂದು ಸಾಕ್ಷಿ ಮಾಡಿಸಿಕೊಂಡು ನಿಶಾನೆ ಪಿ.1 ರಿಂದ 12, ನಿಶಾನೆ ಪಿ.37 ರಿಂದ 40 ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿದ್ದಾರೆ. ತಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಮಧ್ಯಂತರ ಅರ್ಜಿ ನಂ.6ರಲ್ಲಿ ಹೇಳಿದ ಸಂಗತಿಗಳನ್ನು ಪುನರುಚ್ಚರಿಸಿದ್ದಾರೆ. ದಿಃ26/08/1980 ರಂದು ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಮಕ್ಕಳು ಅರ್ಜಿಯ ಐಟಂ ನಂ.2 ಹರ್ಲಾಪುರ ಗ್ರಾಮದ ಸ.ನಂ.32/ಪಿ ಉತ್ತರ ಭಾಗದ 4 ಎಕರೆ 3 ವರೆ ಗುಂಟೆ ಜಮೀನಿನ ಪೈಕಿ ಪಶ್ಚಿಮ ಭಾಗದ 1 ಎಕರೆ 20 ಗುಂಟೆ ಜಮೀನನ್ನು 1. ಸೈಯದ್ ಸಬ್ಜಾನ್ ಸಾಬ್ 2. ಸೈಯದ್ ಸುಬಾನ್, 3. ಸೈಯದ್ ಅಮಾನುಲ್ಲಾ ಮತ್ತು ಬಿ.ಜಿ.ಶಿವರಾಜ್ ಎನ್ನುವವರಿಗೆ ಮಾರಾಟ ಮಾಡಿದ್ದಾರೆಂದು ಕ್ರಯಪತ್ರದ ದೃಢಿಕೃತ ನಕಲು ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ.1 ಎಂದು ಗುರುತಿಸಿಕೊಂಡಿದ್ದಾರೆ. ಸದರಿ ಕ್ರಯಪತ್ರದ ಕನ್ನಡ ಭಾಷಾಂತರದ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ1(ಎ) ಎಂದು ಗುರುತಿಸಿಕೊಂಡಿದ್ದಾರೆ. ಸದರಿ ಕ್ರಯಪತ್ರದ ಮೇರೆಗೆ ದಿಃ05/09/1980 ರಂದು 1. ಸೈಯದ್ ಸಬ್ಜಾನ್ ಸಾಬ್ 2. ಸೈಯದ್ ಸುಬಾನ್, 3. ಸೈಯದ್ ಅಮಾನುಲ್ಲಾ ಮತ್ತು ಬಿ.ಜಿ.ಶಿವರಾಜ್ ಎನ್ನುವವರ ಹೆಸರಿಗೆ ಖಾತಾ ವರ್ಗಾವಣೆಯಾದ ಬಗ್ಗೆ ಮ್ಯುಟೇಶನ್ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ.2 ಎಂದು ಗುರುತಿಸಿಕೊಂಡಿದ್ದಾರೆ. 1990-91, 1995-96 ರಿಂದ 1999-2000 ರ ಎರಡು ಪಹಣಿಪತ್ರಿಕೆಗಳನ್ನು ಹಾಜರುಪಡಿಸಿ ನಿಶಾನೆ ಪಿ.3 ಮತ್ತು 4 ಎಂದು ಗುರುತಿಸಿಕೊಂಡಿದ್ದಾರೆ. ಸದರಿ ಪಹಣಿಪತ್ರಿಕೆಗಳ ಕಲಂ .9 ಮತ್ತು 12(2) ರಲ್ಲಿ 1. ಸೈಯದ್ ಸಬ್ಜಾನ್ ಸಾಬ್ 2. ಸೈಯದ್ ಸುಬಾನ್, 3. ಸೈಯದ್ ಅಮಾನುಲ್ಲಾ ಮತ್ತು ಬಿ.ಜಿ.ಶಿವರಾಜ್ ಎನ್ನುವವರ ಹೆಸರು ಮಾಲೀಕ ಮತ್ತು ಸ್ವಾಧೀನದಾರ ಎಂದು ನಮೂದಾಗಿದೆ. ಸದರಿ ಜಮೀನನ್ನು ದಿ.21/06/1985 ರಂದು ಭೂ ಪರಿವರ್ತನೆ ಮಾಡಿದ ಬಗ್ಗೆ ಜಿಲ್ಲಾಧಿಕಾರಿಗಳ ಆದೇಶದ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ.11 ಎಂದು ಗುರುತಿಸಿಕೊಂಡಿದ್ದಾರೆ. ಹರಿಹರ ನಗರಸಭೆಯವರು ಸ.ನಂ,32/ಪಿಯಲ್ಲಿ ಆದ ನಿವೇಶನಗಳ ಲೇಔಟ್ ಪ್ಲಾನ್ ಲಭ್ಯವಿರುವುದಿಲ್ಲವೆಂದು ಹಿಂಬಹರ ನೀಡಿದ್ದಾರೆ ಅದನ್ನು

ಹಾಜರುಪಡಿಸಿ ನಿಶಾನೆ ಪಿ.12 ಎಂದು ಗುರುತಿಸಿಕೊಂಡಿದ್ದಾರೆ. ಅರ್ಜಿದಾರರು ಲೇಔಟ್ ಪ್ಲಾನಿನ ಜೆರಾಕ್ಸ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಅರ್ಜಿದಾರರಾದ ಗಣೇಶ್ ಎನ್ನುವವರು ದಿಃ02/06/2009 ರಂದು ನಿವೇಶನ ಸಂಖ್ಯೆಃ17 ಮತ್ತು 21ನ್ನು ಖರೀದಿಸಿದ ಬಗ್ಗೆ ನೊಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿ ನಿಶಾನೆ ಪಿ.5 ಎಂದು ಗುರುತಿಸಿಕೊಂಡಿದ್ದಾರೆ. ಸದರಿ ನಿವೇಶನಗಳು ಅರ್ಜಿದಾರರ ಹೆಸರಿನಲ್ಲಿ ಖಾತಾ ಬದಲಾವಣೆಯಾದ ಬಗ್ಗೆ ಹರಿಹರ ನಗರಸಬೆಯ ಡಿಮ್ಯಾಂಡ್ ರಿಜಿಸ್ಟರಿನ ಪ್ರತಿಯನ್ನು ಹಾಜರುಪಡಿಸಿದ್ದು, ನಿಶಾನೆ ಪಿ.6 ಎಂದು ಗುರ್ತಿಸಿಕೊಂಡಿದ್ದಾರೆ. ಸದರಿ ನಿವೇಶನಗಳು ಅಸ್ತಿತ್ವದಲ್ಲಿವೆ ಎಂದು ತೋರಿಸಲು 4 ಭಾಗವಚಿತ್ರಗಳನ್ನು ಹಾಜರುಪಡಿಸಿ ನಿಶಾನೆ ಪಿ.7 ರಿಂದ 10 ಎಂದು ಗುರುತಿಸಿಕೊಂಡಿದ್ದಾರೆ.

15. ಅರ್ಜಿದಾರರಾದ ಗಣೇಶ್ ಎನ್ನುವವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ನಿಶಾನೆ ಪಿ.37 ರಿಂದ 40 ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿದ್ದಾರೆ. ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಸಹೋದರರು ಸ.ನಂ.32/ಪಿ ಜಮೀನಿನ ಪೈಕಿ 1 ಎಕರೆ 38 ಗುಂಟೆ ಜಮೀನನ್ನು ದಿಃ06/08/1970 ಮಾರಾಟ ಮಾಡಿದ್ದಾರೆಂದು ಕ್ರಯಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ.37 ಎಂದು ಗುರುತಿಸಿಕೊಂಡಿದ್ದಾರೆ. ಸದರಿ ಕ್ರಯಪತ್ರದ ಇಂಗ್ಲೀಷ್ ಭಾಷಾಂತರದ ಪ್ರತಿಯನ್ನು ನಿಶಾನೆ ಪಿ.37(ಎ) ಎಂದು ಗುರುತಿಸಿಕೊಂಡಿದ್ದಾರೆ. ದಿಃ27/03/2002 ರಂದು ಸ.ನಂ.32/ಪಿ5 ಮ್ಯುಟೇಶನ್ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ.38 ಎಂದು ಗುರುತಿಸಿಕೊಂಡಿದ್ದಾರೆ. 2015-16ರ ಪಹಣಿಪತ್ರಿಕೆಯನ್ನು ಹಾಜರುಪಡಿಸಿ ನಿಶಾನೆ ಪಿ.39 ಎಂದು ಗುರುತಿಸಿಕೊಂಡಿದ್ದಾರೆ. ದಿಃ28/02/1974 ರಂದು ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಸಹೋದರರು ವಿಭಾಗಪತ್ರ ಮಾಡಿಕೊಂಡಿದ್ದಾರೆಂದು ವಿಭಾಗಪತ್ರದ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ.40 ಎಂದು ಗುರುತಿಸಿಕೊಂಡಿದ್ದಾರೆ. ಕನ್ನಡ ಭಾಷಾಂತರ ಪ್ರತಿಯನ್ನು ನಿಶಾನೆ ಪಿ.40(ಎ) ಎಂದು ಗುರುತಿಸಿಕೊಂಡಿದ್ದಾರೆ. ಕಮೀಷನರ ರವರ ಮಹಜರ್ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ.41 ಮತ್ತು 42 ಎಂದು

ಗುರುತಿಸಿಕೊಂಡಿದ್ದಾರೆ. ಅರ್ಜಿಯ ಐಟಂ ನಂ.4 ಮತ್ತು 5ರ ಡಿಕ್ರಿದಾರರಿಗೆ ಸ್ವಾಧೀನವಹಿಸಿಕೊಟ್ಟ ಬಗ್ಗೆ ರಶೀದಿಗಳನ್ನು ಹಾಜರುಪಡಿಸಿ ನಿಶಾನೆ ಪಿ.43 ಮತ್ತು 44 ಎಂದು ಗುರುತಿಸಿಕೊಂಡಿದ್ದಾರೆ.

16. ಡಿಕ್ರಿದಾರರು ಮಧ್ಯಂತರ ಅರ್ಜಿ ನಂ.6 ಕ್ಕೆ ತಕರಾರುಗಳನ್ನು ಸಲ್ಲಿಸಿ ಅರ್ಜಿಯ ಎಲ್ಲಾ ವಿವರಗಳನ್ನು ಅಲ್ಲಗಳೆದು ಅರ್ಜಿಯ ಐಟಂ ನಂ.2ರಲ್ಲಿ ಮೂಲ ದಾವೆ ನಂ.77/1995 ಮತ್ತು ಎಫ್.ಡಿ.ಪಿ.ನಂ.18/2000 ಅಂತಿಮ ಡಿಕ್ರಿ ಆದೇಶದ ಮೇರೆಗೆ ಭಾಗಂಶದ ಹಕ್ಕನ್ನು ಹೊಂದಿದ್ದೇನೆಂದು ಸಾಬೀತುಪಡಿಸಲು ತನ್ನನ್ನು ಆರ್.ಡಬ್ಲೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ನಿಶಾನೆ ಆರ್.1 ರಿಂದ 39 ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿದ್ದಾರೆ. ಎಫ್.ಡಿ.ಪಿ.ನಂ.18/2002ರ ಅಂತಿಮ ಡಿಕ್ರಿಯನ್ನು ಹಾಜರುಪಡಿಸಿ ನಿಶಾನೆ ಆರ್.1, ಸ.ನಂ.32/ಪಿ ಜಮೀನಿನ ಕುರಿತು ಅನುಭವದಂತೆ ಸ್ವಾಧೀನಪಡಿಸಬೇಕೆಂದು ಡಿಕ್ರಿದಾರರು ಮತ್ತು ತೀರ್ಪುಋಣಿಗಳು ಹೇಳಿದ ಮೇರೆಗೆ ಸರ್ವೆಯರ್ ರವರು ಪಂಚನಾಮೆ ಮಾಡಿದ್ದಾರೆಂದು ಅದರ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಆರ್.2 ಎಂದು ಗುರುತಿಸಿಕೊಂಡಿದ್ದಾರೆ, ನಕಾಶೆಯನ್ನು ನಿಶಾನೆ ಆರ್.3 ಮ್ಯುಟೇಶನ್ ಪ್ರತಿಗಳನ್ನು ನಿಶಾನೆ ಆರ್.4 ಮತ್ತು 5 ಎಂದು ಗುರುತಿಸಿಕೊಂಡಿದ್ದಾರೆ. ಅನ್ವರ್ ಎಂ.ಜಿ. ಎನ್ನುವವರು ತಹಶೀಲ್ದಾರರವರಿಗೆ ಅರ್ಜಿಯ ಐಟಂ ನಂ.2ರ ಅಳತೆ ಮಾಡಲು ತಮ್ಮ ತಕರಾರು ಇದೆ ಎಂದು ದಿಃ29/06/2005 ರಂದು ಅರ್ಜಿ ಸಲ್ಲಿಸಿದ್ದು, ಅರ್ಜಿಯ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಆರ್.6 ಎಂದು ಗುರುತಿಸಲಾಯಿತು. ಐಟಂ ನಂ.4 ಮತ್ತು 5ಕ್ಕೆ ಸಂಬಂಧಪಟ್ಟ ಪಾಲು ವಿಭಾಗ ತಂಖ್ತೆಯನ್ನು ಹಾಜರುಪಡಿಸಿ ನಿಶಾನೆ ಆರ್.7 ಎಂದು ಗುರುತಿಸಲಾಯಿತು. ನಕಾಶೆಗಳನ್ನು ನಿಶಾನೆ ಆರ್.8 ಮತ್ತು 9 ಎಂದು ಗುರುತಿಸಲಾಯಿತು. ಮೂಲ ದಾವಾ ನಂ.77/1995 ರ ಡಿಕ್ರಿಯ ದೃಢೀಕೃತ ನಕಲನ್ನು ನಿಶಾನೆ ಆರ್.10 ಎಂದು ಗುರುತಿಲಾಯಿತು. ಎಫ.ಡಿ.ಪಿ.18/2002ರ ಆದೇಶದ ದೃಢೀಕೃತ ನಕಲನ್ನು ನಿಶಾನೆ ಆರ್.11 ಎಂದು ಗುರುತಿಲಾಯಿತು. ಸ.ನಂ.32/ಪಿ ರ 1980-81, 2000-01 ರ ಸಾಲಿನ ಪಹಣಿಪತ್ರಿಕೆಗಳನ್ನು ಹಾಜರುಪಡಿಸಿ ನಿಶಾನೆ ಆರ್.12 ರಿಂದ 14 ಎಂದು

ಗುರುತಿಸಿಕೊಂಡಿದ್ದಾರೆ. ಡಿಕ್ರಿದಾರರ ಮಾವ ಮತ್ತು ಅವರ ಕುಟುಂಬದವರ ಹೆಸರುಗಳು ಕಲಂ ನಂ.9 ಮತ್ತು 12(2) ರಲ್ಲಿ ನಮೂದಾಗಿರುವುದು ಕಂಡುಬರುತ್ತದೆ. ಸ.ನಂ.32/ಪಿ1 ಕ್ಷೇತ್ರ 4 ಎಕರೆ 3 ಗುಂಟೆ ಜಮೀನು ಡಿಕ್ರಿದಾರರು 1 ಮತ್ತು 7 ನೇ ತೀರ್ಪುಋಣಿಗಳ ಹೆಸರಿನಲ್ಲಿ ಪೌತಿ ಖಾತೆಯ ಮೇರೆಗೆ ಜಂಟಿ ಸ್ವಾಧೀನಾನುಭವದಲ್ಲಿದೆ ಎಂದು 2000-01 ರಿಂದ 2013-14 ಸಾಲಿನ ಪಹಣಿಪತ್ರಿಕೆಗಳನ್ನು ಹಾಜರುಪಡಿಸಿ ನಿಶಾನೆ ಆರ್.15 ರಿಂದ 28 ಎಂದು ಗುರುತಿಸಿಕೊಂಡಿರುತ್ತಾರೆ. ಸ.ನಂ.32/ಪಿ ರ 1985-86 ರಿಂದ 1989-90 ರ ಸಾಲಿನ ಪಹಣಿಪತ್ರಿಕೆಯನ್ನು ಹಾಜರುಪಡಿಸಿ ನಿಶಾನೆ ಆರ್.29 ಎಂದು ಗುರುತಿಸಿಕೊಂಡಿದ್ದಾರೆ. ಅರ್ಜಿಯ ಐಟಂ ನಂ.2 ರ ಸ್ವತ್ತಿನ ವಸ್ತುಸ್ಥಿತಿಯನ್ನು ತೋರಿಸಲು 5 ಭಾವಚಿತ್ರಗಳನ್ನು ಹಾಜರುಪಡಿಸಿ ನಿಶಾನೆ ಆರ್.30 ರಿಂದ 34 ಎಂದು ಗುರುತಿಸಿಕೊಂಡಿದ್ದಾರೆ. ಸಿ.ಡಿ.ಯನ್ನು ನಿಶಾನೆ ಆರ್.35 ಎಂದು ಗುರುತಿಸಿಕೊಂಡಿದ್ದಾರೆ. ಮೂಲ ದಾವಾ ನಂ.117/2012 ನ್ನು ಅರ್ಜಿದಾರ ಎಂ.ಜಿ.ಜಾವೀದ್ ಎನ್ನುವವರು ಡಿಕ್ರಿದಾರರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ದಾವಾ ಸಲ್ಲಿಸಿದ್ದಾರೆಂದು ಆದೇಶದ ದೃಢೀಕೃತ ನಕಲು ಪ್ರತಿಯನ್ನು ನಿಶಾನೆ ಆರ್,36 ವಾದಪತ್ರದ ದೃಢೀಕೃತ ನಕಲನ್ನು ನಿಶಾನೆ ಆರ್.37, ಪ್ರತಿವಾದಪತ್ರವನ್ನು ನಿಶಾನೆ ಆರ್.38, ವಿವಾದಾಂಶಗಳನ್ನು ನಿಶಾನೆ ಆರ್.39 ಎಂದು ಗುರುತಿಸಿಕೊಂಡಿದ್ದಾರೆ.

17. ಡಿಕ್ರಿದಾರರು ತಮ್ಮ ಪರವಾಗಿ ಹರಿಹರ ಪೊಲೀಸಠಾಣೆಯ ಮುಖ್ಯ ಪೇದೆ ಎನ್.ಆರ್.ರಾಮಪ್ಪ ಎನ್ನುವವರನ್ನು ಆರ್.ಡಬ್ಲೂ.2 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದಾರೆ. ಸದರಿಯವರು ನಿಶಾನೆ ಆರ್.41 ಡಿಲಿವರಿ ವಾರೆಂಟ್ ಮತ್ತು ಮಹಜರಿಗೆ ಸಹಿ ಮಾಡಿದ್ದೇನೆಂದು ಹೇಳಿದ್ದಾರೆ. ಹರಿಹರ ಸಿವಿಲ್ ನ್ಯಾಯಾಲಯದ ಅಮೀನರಾದ ಓಂಕಾರಪ್ಪ ಎನ್ನುವವರನ್ನು ಆರ್.ಡಬ್ಲೂ.3 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ಅರ್ಜಿಯಲ್ಲಿ ತೋರಿಸಿದ ಆಸ್ತಿಗಳ ಸ್ವಾಧೀನ ಕೊಡಿಸಿದ್ದೇನೆಂದು ಹೇಳಿದ್ದಾರೆ. ಹರಿಹರ ತಾಲ್ಲೂಕು ಸರ್ವೆಯರ್ ಶ್ರೀನಿವಾಸ್ ಎನ್.ಜೆ. ಎನ್ನುವವರು ಹರ್ಲಾಪುರ ಗ್ರಾಮದ ಸರ್ವೆ ನಂ.25/1 ಮತ್ತು 32/ಪಿ ಜಮೀನುಗಳ ಸ್ವಾಧೀನವನ್ನು

ಅಮೀನರು ಡಿಕ್ರಿದಾರರಿಗೆ ಕೊಡಿಸಿದ್ದಾರೆಂದು ನುಡಿದಿರುತ್ತಾರೆ.

18. ಡಿಕ್ರಿದಾರರು ತೀರ್ಪುಋಣಿಗಳ ವಿರುದ್ದ ಮುಲ ದಾವಾ ನಂ.77/1995 ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಡಿಕ್ರಿದಾರರಿಗೆ 11/40 ಅಂಶ ಭಾಗಂಶದ ಹಕ್ಕು ಇದೆ ಎಂದು ಆದೇಶವಾಗಿರುತ್ತದೆ. ಆ ಮೇರೆಗೆ ಡಿಕ್ರಿದಾರರು ಎಫ್.ಡಿ.ಪಿ.ನಂ.18/2002 ರಲ್ಲಿ ಅಂತಿಮ ಡಿಕ್ರಿ ಆದೇಶದಂತೆ ಪ್ರಸ್ತುತ ದರಖಾಸ್ತು ಅರ್ಜಿಯನ್ನು ಸಲ್ಲಿಸಿದ್ದು, ಡಿಕ್ರಿದಾರರು ಮತ್ತು ಅವರ ಪರ ಸಾಕ್ಷಿದಾರರಾದ ಹರಿಹರ ತಾಲ್ಲೂಕು ಸರ್ವೆಯರ್, ನ್ಯಾಯಾಲಯದ ಅಮೀನರು ಮತ್ತು ಹರಿಹರ ಪೊಲೀಸಠಾಣೆ ಮುಖ್ಯ ಪೇದೆ ತಮ್ಮ ಸಮಕ್ಷಮ ಅರ್ಜಿಯ ಆಸ್ತಿಗಳ ಸ್ವಾಧೀನ ಪಡೆದುಕೊಂಡಿರುವುದಾಗಿ ಡಿಕ್ರಿದಾರರು ಹೇಳಿದ್ದಾರೆ. ಸದರಿ ಸಂಗತಿಗಳು ಅರ್ಜಿದಾರರಾದ ಗಣೇಶ್ ಎನ್ನುವವರು ತಮ್ಮ ಗಮನಕ್ಕೆ ಬಂದ ನಂತರ ಮಧ್ಯಂತರ ಅರ್ಜಿ 6 ನ್ನು ಸಲ್ಲಿಸಿ ಹರ್ಲಾಪುರ ಗ್ರಾಮದ ಸ.ನಂ.32/ಪಿ ಜಮೀನಿನ ಕ್ಷೇತ್ರ 4 ಎಕರೆ 5 ಗುಂಟೆ ಜಮೀನಿನ ಪೈಕಿ 1 ಎಕರೆ 20 ಗುಂಟೆ ಜಮೀನಿನಲ್ಲಿ ಆದ ನಿವೇಶನಗಳನ್ನು ತಾವು ಖರೀದಿಸಿದ್ದೇವೆಂದು ಸದರಿ ನಿವೇಶನಗಳಿಗೆ ಮಾಲೀಕರು ಎಂದು ತೀರ್ಮಾನಿಸಲು ಸ್ವಾಧೀನತಾ ವಾರೆಂಟನ್ನು ಹಿಂಪಡೆಯಬೇಕೆಂದು ಅರ್ಜಿದಾರರು ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ.

19. ಹರ್ಲಾಪುರ ಗ್ರಾಮದ ಸನಂ.32/ಪಿ ಡಿಕ್ರಿದಾರರ ಕುಟುಂಬಕ್ಕೆ ಸಂಬಂಧಪಟ್ಟಿರುತ್ತದೆ ಎನ್ನುವ ಬಗ್ಗೆ ಯಾವುದೇ ವಿವಾದವಿರುವುದಿಲ್ಲ. ಡಿಕ್ರಿದಾರರು ಮಾರಾಟ ಮಾಡಿದ ಆಸ್ತಿಗಳ ಚೆಕ್ಕುಬಂದಿಯನ್ನು ಸೇರಿಸಿ ಅರ್ಜಿದಾರರ ಗಮನಕ್ಕೆ ಬರದಂತೆ ಡಿಕ್ರಿ ಪಡೆದಿದ್ದು ಸದರಿ ಡಿಕ್ರಿ ತಮಗೆ ಬಂಧನಕಾರಿಯಾಗುವುದಿಲ್ಲವೆಂದು ಅರ್ಜಿದಾರರು ಡಿಕ್ರಿದಾರರ ಮಾವ ಮತ್ತು ಆತನ ಸಹೋದರರ ಮಧ್ಯದಲ್ಲಿ ಆದ ಪಾಲು ವಿಭಾಗಪತ್ರವನ್ನು ಹಾಜರುಪಡಿಸಿ ನಿಶಾನೆ ಪಿ.40 ಎಂದು ಗುರುತಿಸಿಕೊಂಡಿದ್ದಾರೆ. ಸದರಿ ಪಾಲುವಿಭಾಗಪತ್ರದ ಭಾಷಾಂತರದ ಪ್ರತಿಯನ್ನು ಹಾಜರುಪಡಿಸಿ ನಿಶಾನೆ ಪಿ.40(ಎ) ಎಂದು ಗುರುತಿಸಿಕೊಂಡಿದ್ದಾರೆ. ಸದರಿ ಪಾಲು ವಿಭಾಗಪತ್ರವನ್ನು ಪರಿಶೀಲಿಸಲಾಗಿ,

ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಸಹೋದರು ದಿಃ29/08/1974 ರಂದು ನೊಂದಾಯಿತ ಪಾಲು ವಿಭಾಗಪತ್ರ ಮಾಡಿಕೊಂಡಿದ್ದು, ಸದರಿ ಪಾಲು ವಿಭಾಗದ ಮೂಲಕ ಹರ್ಲಾಪುರ ಗ್ರಾಮದ ಸರ್ವೆ ನಂ.32 ಕ್ಷೇತ್ರ 10 ಎಕರೆ 7 ಗುಂಟೆ ಜಮೀನಿನ ಉತ್ತರ ಭಾಗದ 5 ಎಕರೆ 3 ವರೆ ಗುಂಟೆ ಜಮೀನು ವಾದಿಯ ಮಾವ ಬೀರಪ್ಪನಿಗೆ ದಕ್ಷಿಣ ಭಾಗದ 5 ಎಕರೆ 3ವರೆ ಗುಂಟೆ ಬೀರಪ್ಪನ ಸಹೋದರ ನಾಗಪ್ಪ ನವರ ಹಿಸ್ಸೆಗೆ ಬಂದಿರುತ್ತದೆ. ಸದರಿ ಜಮೀನಿನ ಚೆಕ್ಕುಬಂದಿಯನ್ನು ಪರಿಶೀಲಿಸಲಾಗಿ ಈ ಕೆಳಗಿನಂತಿದೆ.

ಪೂರ್ವಕ್ಕೆ ಃ ಹರಪನಹಳ್ಳಿಯಿಂದ ದಾವಣಗೆರೆಗೆ ಹೋಗುವ ಹಳೆಯ ರಸ್ತೆ

ಪಶ್ಚಿಮಕ್ಕೆ ಃ ಹರಿಹರದಿಂದ ಹರಪನಹಳ್ಳಿಗೆ ಹೋಗುವ ರಸ್ತೆ

ಉತ್ತರಕ್ಕೆ ಃ ಕರೆ ಗೋವಿಂದಪ್ಪನವರ ಜಮೀನು

ದಕ್ಷಿಣಕ್ಕೆ ಃ ಇದೆ ನಂಬರಿನ ಪೈಕಿ ನಾಗಪ್ಪನ ಹಿಸ್ಸೆಗೆ ಬಂದ ಜಮೀನು

ಎಂದು ಬರೆದಿದ್ದಾರೆ.

ಬೀರಪ್ಪ ಮತ್ತು ಆತನ ಕುಟುಂಬದವರು ಸದರಿ ಜಮೀನಿನ ಪೈಕಿ ದಿಃ06/08/1970 ರಂದು ಕ್ಷೇತ್ರ 1 ಎಕರೆ 38 ಗುಂಟೆ ಜಮೀನು ಮೈಸೂರು ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟ ಗೆ ಭೂ ಸ್ವಾಧೀನವಾಗಿರುತ್ತದೆ. ಸದರಿ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿ ನಿಶಾನೆ ಪಿ.37 ಎಂದು ಇಂಗ್ಲೀಷ್ ಭಾಷಾಂತರ ಪ್ರತಿಯನ್ನು ನಿಶಾನೆ ಪಿ.37(ಎ) ಎಂದು ಗುರುತಿಸಿಕೊಂಡಿದ್ದಾರೆ. ಸದರಿ ಕ್ರಯಪತ್ರವನ್ನು ಪರಿಶೀಲಿಸಲಾಗಿ, ವಾದಿಯ ಮಾವ ಬೀರಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಳ್ಳುವ ಮೊದಲೇ ಹರ್ಲಾಪುರ ಗ್ರಾಮದ ಸ.ನಂ.32ರಲ್ಲಿ 1 ಎಕರೆ 38 ಗುಂಟೆ ಭೂ ಸ್ವಾಧೀನಪಡಿಸಿಕೊಂಡಿದ್ದನ್ನು ಮತ್ತು ನಿಶಾನೆ ಪಿ.37 ಕ್ರಯಪತ್ರದ ಕುರಿತು ನಿಶಾನೆ ಪಿ.40 ವಿಭಾಗಪತ್ರದಲ್ಲಿ ತೋರಿಸಿರುವುದಿಲ್ಲ. ನಿಶಾನೆ ಪಿ.37 ಕ್ರಯ ಪತ್ರದ ಚೆಕ್ಕುಬಂದಿ ಈ ಕೆಳಗಿನಂತಿರುತ್ತದೆ.

ಪೂರ್ವಕ್ಕೆ ಃ ಉಳಿದ ಜಮೀನು

ಪಶ್ಚಿಮಕ್ಕೆ ಃ ಹರಿಹರ

ಉತ್ತರಕ್ಕೆ ಃ ಸ.ನಂ.33/2

ದಕ್ಷಿಣಕ್ಕೆ ಃ ಹರಿಹರ ಗ್ರಾಮ ಎಂದು ತೋರಿಸಿದ್ದಾರೆ.

20. ಸ,ನಂ,32ರಲ್ಲಿ ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಳ್ಳುವುದಕ್ಕಿಂತ ಮೊದಲೇ ದಿಃ06/08/1970 ರಂದು ಕ್ರಯಪತ್ರವಾಗಿದ್ದರು ಸದರಿ ಕ್ರಯಪತ್ರದಲ್ಲಿ ತೋರಿಸಿದ 1 ಎಕರೆ 38 ಗುಂಟೆ ಜಮೀನನ್ನು ಸೇರಿಸಿ ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಸಹೋದರ ನಾಗಪ್ಪ ಎನ್ನುವವರು ನಿಶಾನೆ ಪಿ.40 ರ ಪ್ರಕಾರ ಒಟ್ಟು ಕ್ಷೇತ್ರ 10 ಎಕರೆ 7 ಗುಂಟೆ ಜಮೀನಿನ ಕುರಿತು ವಿಭಾಗ ಮಾಡಿಕೊಂಡಿದ್ದಾರೆ. ಸದರಿ ವಿಭಾಗಪತ್ರದಲ್ಲಿ 1 ಎಕರೆ 38 ಗುಂಟೆ ಜಮೀನು ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟಗೆ ಭೂಸ್ವಾಧೀನವಾದ ಬಗ್ಗೆ ಹೇಳಿರುವುದಿಲ್ಲ. ಆ ಕುರಿತು ಡಿಕ್ರಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಲಾಗಿ "ಬೀರಪ್ಪ ಮತ್ತು ಆತನ ಸಹೋದರರು ದಿಃ22/08/1974 ರಂದು ವಿಭಾಗ ಮಾಡಿಕೊಂಡಿದ್ದಾರೆಂದು ಒಪ್ಪಿಕೊಂಡಿದ್ದಾರೆ." ಆದರೆ ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟಗೆ ಭೂಸ್ವಾಧೀನವಾದ ಬಗ್ಗೆ ತೋರಿಸಿರುವುದಿಲ್ಲವೆಂದು ಆರ್.ಡಬ್ಲೂ.1ರವರ ಪಾಟೀ ಸವಾಲಿನ ಪುಟ ಸಂಖ್ಯೆಃ21ನ್ನು ಪರಿಶೀಲಿಸಲಾಗಿ, "ಕಿರ್ಲೋಸ್ಕರ್ ಶಾಲಾ ಶಿಕ್ಷಣ ಸಂಸ್ಥೆಯ ಟ್ರಸ್ಟ ಈ ಜಮೀನು 4 ಎಕರೆ 5 ಗುಂಟೆ ಜಮೀನಿನ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ತೋರಿಸಿಲ್ಲ. 4 ಎಕರೆ 5 ಗುಂಟೆ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಇರುವ ಜಮೀನು ಕಿರ್ಲೋಸ್ಕರ್ ಶಾಲಾ ಶಿಕ್ಷಣ ಸಂಸ್ಥೆಯ ಟ್ರಸ್ಟಗೆ ಸಂಬಂಧಪಟ್ಟ ಜಮೀನು ಅಂದರೆ ಸರಿ" ಎಂದು ಒಪ್ಪಿಕೊಂಡಿದ್ದಾರೆ.

21. ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಸಹೋದರರು ಕಿರ್ಲೋಸ್ಕರ್ ಶಿಕ್ಷಣ ಸಂಸ್ಥೆಯ ಟ್ರಸ್ಟಗೆ ಭೂಸ್ವಾಧೀನವಾದ ನಂತರ ವಿಭಾಗ ಮಾಡಿಕೊಂಡಿದ್ದಾರೆಂದು ಆರ್.ಡಬ್ಲೂ.1 ರವರನ್ನು ಪಾಟೀ ಸವಾಲಿಗೆ ಒಳಪಡಿಸಲಾಗಿ ಪುಟ ಸಂಖ್ಯೆಃ25 ಖಂಡಿಕೆ 18ರಲ್ಲಿ "ನನ್ನ ಮಾವನಾದ ಬೀರಪ್ಪ ಮತ್ತು ಆತನ ತಮ್ಮ ನಾಗಪ್ಪ ಇವರ ನಡುವೆ ಪಾಲು

ವಿಭಾಗವಾಗುವುದಕ್ಕಿಂತ ಮುಂಚೆ ಮೇಲೆ ಹೇಳಿದ 1 ಎಕರೆ 38 ಗುಂಟೆ ಜಮೀನು ಕಿರ್ಲೋಸ್ಕರ್ ಶಿಕ್ಷಣ ಟ್ರಸ್ಟನವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯೆಂದು" ಒಪ್ಪಿಕೊಂಡಿದ್ದಾರೆ. ನಿಶಾನೆ ಪಿ.40 ವಿಭಾಗಪತ್ರದಲ್ಲಿ ಸರ್ವೆ ನಂ.32ರಲ್ಲಿ ಪಶ್ಚಿಮದ ಕಡೆಗೆ ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟಗೆ ಭೂಸ್ವಾಧೀನವಾದ ಜಮೀನು ಎಂದು ತೋರಿಸುವುದರ ಬದಲಾಗಿ ಹರಿಹರದಿಂದ ಹರಪನಹಳ್ಳಿಗೆ ಹೋಗುವ ರಸ್ತೆ ಎಂದು ತೋರಿಸಿದ್ದಾರೆಂದು ನಿಶಾನೆ ಪಿ.37 ಕ್ರಯಪತ್ರ ಮತ್ತು ನಿಶಾನೆ ಪಿ.40 ವಿಭಾಗಪತ್ರದಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಸದರಿ ವಿಭಾಗಪತ್ರದಲ್ಲಿ ಸರ್ವೆ ನಂ.32 ಒಟ್ಟು ಕ್ಷೇತ್ರ 10 ಎಕರೆ 7 ಗುಂಟೆ ಜಮೀನಿನ ಉತ್ತರದ 5 ಎಕರೆ 3 ವರೆ ಗುಂಟೆ ಡಿಕ್ರಿದಾರರ ಮಾವ ಬೀರಪ್ಪನಿಗೆ ದಕ್ಷಿಣ ಭಾಗದ 5 ಎಕರೆ 3 ವರೆ ಗುಂಟೆ ನಾಗಪ್ಪನ ಹಿಸ್ಸೆಗೆ ಎಂದು ತೋರಿಸಿದ್ದಾರೆ ಆದರೆ ನಿಶಾನೆ ಪಿ.37 ಕ್ರಯಪತ್ರದಲ್ಲಿ ತೋರಿಸಿದ 1 ಎಕರೆ 38 ಗುಂಟೆ ಜಮೀನನ್ನು ಕಳೆದು ಉಳಿದ ಜಮೀನಿನಲ್ಲಿ ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಸಹೋದರ ನಾಗಪ್ಪನಿಗೆ ಹಿಸ್ಸೆ ಬರುತ್ತದೆ. ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟನ ಹೆಸರಿನಲ್ಲಿ ನಿಶಾನೆ ಪಿ.38 ರಂತೆ ಮ್ಯುಟೇಶನ್ ಆಗಿರುತ್ತದೆ ಮತ್ತು ನಿಶಾನೆ ಪಿ.39 ರಂತೆ ಪಹಣಿಪತ್ರಿಕೆಯ ಕಲಂ ನಂ.9 ಮತ್ತು 12(2)ರಲ್ಲಿ ಮಾಲೀಕರು ಮತ್ತು ಸ್ವಾಧೀನದಾರರು ಎಂದು ನಮೂದಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಡಿಕ್ರಿದಾರರು ಸಹ ಅರ್ಜಿಯ ಆಸ್ತಿ ಐಟಂ ನಂ.2ರ ಸ.ನಂ.32/ಪಿರಲ್ಲಿ 4 ಎಕರೆ 5 ಗುಂಟೆ ಜಮೀನಿನಲ್ಲಿ ಭಾಗಾಂಶದ ಹಕ್ಕನ್ನು ಕೇಳಿದ್ದಾರೆ ಆದರೆ ಚೆಕ್ಕುಬಂದಿಯಲ್ಲಿ ಪಶ್ಚಿಮದ ಕಡೆಗೆ ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟ ನ ಶಿಕ್ಷಣ ಸಂಸ್ಥೆ ಎಂದು ನಮೂದಿಸಿದೆ. ಹರಪನಹಳ್ಳಿ-ಹರಿಹರ ರಸ್ತೆ ಎಂದು ಒಟ್ಟು 10 ಎಕರೆ 7 ಗುಂಟೆ ಜಮೀನಿನ ಚೆಕ್ಕುಬಂದಿಯನ್ನು ತೋರಿಸಿದ್ದಾರೆ ಆದ್ದರಿಂದ ಡಿಕ್ರಿದಾರರಿಗೆ ಮತ್ತು ನ್ಯಾಯಾಲಯದ ಅಮೀನರಿಗೆ, ಸರ್ವೆಯರಿಗೆ ಸರ್ವೆ ನಂ.32/ಪಿ ಜಮೀನಿನ ವಿಸ್ತೀರ್ಣ ಹೊಂದಾಣಿಯಾಗುವುದಿಲ್ಲವೆಂದು ಸರ್ವೆಯರರವರು ವರದಿ ಸಲ್ಲಿಸಿದ್ದಾರೆ.

22. ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಮಕ್ಕಳ ಪರವಾಗಿ ಅರ್ಜಿಯ ಐಟಂ ನಂ.2 ಹರ್ಲಾಪುರ ಗ್ರಾಮದ ಸ.ನಂ.32/ಪಿ 4 ಎಕರೆ 3 ವರೆ ಗುಂಟೆ ಜಮೀನಿನ ಪೈಕಿ ಪಶ್ಚಿಮ

ದಿಕ್ಕಿನ 1 ಎಕರೆ 20 ಗುಂಟೆ ಜಮೀನನ್ನು ದಿಃ26/08/1980 ರಂದು 1. ಸೈಯದ್ ಸಬ್ಜಾನ್ ಸಾಬ್ 2. ಸೈಯದ್ ಸುಬಾನ್, 3. ಸೈಯದ್ ಅಮಾನುಲ್ಲಾ ಮತ್ತು ಬಿ.ಜಿ.ಶಿವರಾಜ್ ಎನ್ನುವವರಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ. ಡಿಕ್ರಿದಾರರು ಸದರಿ ಕ್ರಯಪತ್ರವನ್ನು ಅಲ್ಲಗಳೆದಿರುತ್ತಾರೆ. ಡಿಕ್ರಿದಾರರು ಮೂಲ ದಾವಾ ನಂ.77/1995 ರಲ್ಲಿ ಸದರಿ ಅರ್ಜಿ ಐಟಂ ನಂ.2 ರಲ್ಲಿ ಸ.ನಂ.32/ಪಿ ಒಟ್ಟು 4 ಎಕರೆ 3 ವರೆ ಗುಂಟೆ ಜಮೀನಿಗೆ ವಿಭಾಗ ಕೋರಿ ದಾವಾ ಸಲ್ಲಿಸಿದ್ದು, ಆ ಪ್ರಕಾರ ಡಿಕ್ರಿಯಾಗಿರುತ್ತದೆ. ಡಿಕ್ರಿದಾರರು ಸದರಿ ಮೂಲ ದಾವೆಯಲ್ಲಿ ಡಿಕ್ರಿದಾರರ ಮಾವ ನಿಶಾನೆ ಪಿ.1(ಎ) ಕ್ರಯಪತ್ರದ ಮೇರೆಗೆ ಮಾರಾಟ ಮಾಡಿದ ಬಗ್ಗೆ ದಾವೆಯಲ್ಲಿ ಹೇಳಿರುವುದಿಲ್ಲ ಮತ್ತು ಸದರಿ ಕ್ರಯಪತ್ರದ ಬಗ್ಗೆ ಯಾವುದೇ ಪರಿಹಾರವನ್ನು ಕೇಳಿರುವುದಿಲ್ಲ. ನಿಶಾನೆ ಪಿ.1 ಕ್ರಯಪತ್ರದ ಆಧಾರದ ಮೇಲೆ ದಿಃ05/09/1980 ರಂದು ಖರೀದಿದಾರರಾದ 1. ಸೈಯದ್ ಸಬ್ಜಾನ್ ಸಾಬ್ 2. ಸೈಯದ್ ಸುಬಾನ್, 3. ಸೈಯದ್ ಅಮಾನುಲ್ಲಾ ಮತ್ತು ಬಿ.ಜಿ.ಶಿವರಾಜ್ ಎನ್ನುವವರ ಹೆಸರಿಗೆ ಮ್ಯುಟೇಶನ್ ಆಗಿರುತ್ತದೆ. ಅದೇ ಪ್ರಕಾರ 1994-95 ರಿಂದ 1995-96 ರವರೆಗೆ ಪಹಣಿಪತ್ರಿಕೆಗಳ ಕಲಂ ನಂ.9 ಮತ್ತು 12(2)ರಲ್ಲಿ ಖರೀದಿದಾರರಾದ 1. ಸೈಯದ್ ಸಬ್ಜಾನ್ ಸಾಬ್ 2. ಸೈಯದ್ ಸುಬಾನ್, 3. ಸೈಯದ್ ಅಮಾನುಲ್ಲಾ ಮತ್ತು ಬಿ.ಜಿ.ಶಿವರಾಜ್ ಮಾಲೀಕರು ಮತ್ತು ಸ್ವಾಧೀನದಾರರು ಎಂದು ನಮೂದಾಗಿರುತ್ತದೆ. ಸದರಿಯವರು ದಿಃ21/06/1985 ರಂದು 1 ಎಕರೆ 20 ಗುಂಟೆ ಜಮೀನಿನ ಭೂ ಪರಿವರ್ತನೆ ಮಾಡಿದ ಆದೇಶವನ್ನು ಹಾಜರುಪಡಿಸಿ ನಿಶಾನೆ ಪಿ.11 ಎಂದು ಗುರ್ತಿಸಿಕೊಂಡಿದ್ದಾರೆ. ಸದರಿ 1 ಎಕರೆ 20 ಗುಂಟೆ ಜಮೀನಿನಲ್ಲಿ 33 ನಿವೇಶನಗಳಾಗಿದ್ದು, ಸದರಿ ನಿವೇಶನಗಳ ಪೈಕಿ ಅರ್ಜಿದಾರರಾದ ಗಣೇಶ್ ಎನ್ನುವವರು ನಿವೇಶನ ಸಂಖ್ಯೆಃ17 ಮತ್ತು 21 ನ್ನು ಖರೀದಿಸಿದ್ದಾರೆ. ಆದರೆ ಡಿಕ್ರಿದಾರರು ಸದರಿ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ.

23. ಡಿಕ್ರಿದಾರರ ಮಾವ ದಿಃ26/08/1980 ರಂದು 1. ಸೈಯದ್ ಸಬ್ಜಾನ್ ಸಾಬ್ 2. ಸೈಯದ್ ಸುಬಾನ್, 3. ಸೈಯದ್ ಅಮಾನುಲ್ಲಾ ಮತ್ತು ಬಿ.ಜಿ.ಶಿವರಾಜ್ ಎನ್ನುವವರಿಗೆ ಸ.ನಂ.32/ಪಿ ಉತ್ತರ ಭಾಗದ 4 ಎಕರೆ 3 ವರೆ ಗುಂಟೆ ಜಮೀನಿನ ಪಶ್ಚಿಮ ದಿಕ್ಕಿನ 1 ಎಕರೆ 20

ಗುಂಟೆ ಜಮೀನನ್ನು ಮಾರಾಟ ಮಾಡಿದ್ದು, ಸದರಿ 1 ಎಕರೆ 20 ಗುಂಟೆ ಜಮೀನಿನ ಚೆಕ್ಕುಬಂದಿಯನ್ನು ಈ ಕೆಳಗಿನಂತೆ ತೋರಿಸಿದ್ದಾರೆ.

ಪೂರ್ವಕ್ಕೆ ಃ ಇದೇ ಸ.ನಂಬರಿನ ಉಳಿದ ಜಮೀನು

ಪಶ್ಚಿಮಕ್ಕೆ ಃ ಮೈಸೂರು ಕಿರ್ಲೋಸ್ಕರ ಕಂಪನಿ ಎಜುಕೇಶನ್ ಟ್ರಸ್ಟ ಪರವಾಗಿ ಭೂ ಸ್ವಾಧೀನವಾದ ಜಮೀನು

ಉತ್ತರಕ್ಕೆ ಃ ಕರೇ ಗೋವಿಂದಪ್ಪನವರ ಜಮೀನು

ದಕ್ಷಿಣಕ್ಕೆ ಃ ನನ್ನ ತಮ್ಮ ನಾಗಪ್ಪನ ಹಿಸ್ಸೆಗೆ ಬಂದ ಜಮೀನು ಎಂದು ತೋರಿಸಿದ್ದಾರೆ.

24. ನಿಶಾನೆ ಪಿ.1 ಕ್ರಯಪತ್ರವನ್ನು ಡಿಕ್ರಿದಾರರು ಅಲ್ಲಗಳೆದಿದ್ದು, ಆ ಕುರಿತು ಡಿಕ್ರಿದಾರರಿಗೆ ಅರ್ಜಿದಾರರ ಪರ ವಕೀಲರು ಪುಟ ಸಂಖ್ಯೆಃ28 ಖಂಡಿಕೆ 22 ರಲ್ಲಿ ಪಾಟೀ ಸವಾಲಿಗೆ ಒಳಪಡಿಸಿದಾಗ "ಮೈಸೂರು ಕಿರ್ಲೋಸ್ಕರ್ ಕಂಪನಿಯವರು ಕ್ರಯಕ್ಕೆ ತೆಗೆದುಕೊಂಡ ಜಮೀನಿನ ಪೂರ್ವ ದಿಕ್ಕಿಗೆ 1 ಎಕರೆ 20 ಗುಂಟೆ ಜಮೀನನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಲಾಗಿದೆ ಎಂದರೆ ಸುಳ್ಳು. ಮೈಸೂರು ಕಿರ್ಲೋಸ್ಕರ್ ಕಂಪನಿಯವರು ಕ್ರಯಕ್ಕೆ ತೆಗೆದುಕೊಂಡ 1 ಎಕರೆ 38 ಗುಂಟೆ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯೆಂದು ಒಪ್ಪಿಕೊಂಡಿದ್ದಾರೆ. ಆದರೆ ನಿಶಾನೆ ಪಿ.1 ಕ್ರಯಪತ್ರವನ್ನು ಅಲ್ಲಗಳೆದಿರುತ್ತಾರೆ. ಡಿಕ್ರಿದಾರರು ದಾವಾ ಆಸ್ತಿಯು ತನ್ನ ಮಾವ ಬೀರಪ್ಪನಿಂದ ಬಂದಿದೆ ಎಂದು ಕ್ಲೇಮು ಮಾಡುತ್ತಿರುವುದರಿಂದ ಆತನ ಜೀವಿತಾವಧಿಯಲ್ಲಿ ಆತನು ಮಾರಾಟ ಮಾಡಿದ ಎಲ್ಲಾ ವ್ಯವಹಾರಗಳಿಗೂ ಬೀರಪ್ಪನ ಎಲ್ಲಾ ವಾರಸುದಾರರಿಗು ಬಂಧನಕಾರಿಯಾಗುತ್ತದೆ. ಡಿಕ್ರಿದಾರರು ಮೂಲ ದಾವೆ ನಂ.77/1995 ದಾವೆಯಲ್ಲಿ ನಿಶಾನೆ ಪಿ.1 ಕ್ರಯಪತ್ರದ ಬಗ್ಗೆ ಹೇಳಿರುವುದಿಲ್ಲ ಮತ್ತು ಖರೀದಿದಾರರಾದ 1. ಸೈಯದ್ ಸಬ್ಜಾನ್ ಸಾಬ್ 2. ಸೈಯದ್ ಸುಬಾನ್, 3. ಸೈಯದ್ ಅಮಾನುಲ್ಲಾ ಮತ್ತು ಬಿ.ಜಿ.ಶಿವರಾಜ್ ಎನ್ನುವವರನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ಡಿಕ್ರಿದಾರರು ದಾವೆಯಲ್ಲಿ ನಿಶಾನೆ ಪಿ.40 ವಿಭಾಗಪತ್ರದಲ್ಲಿ ತೋರಿಸಿದ ಚೆಕ್ಕುಬಂದಿಯಲ್ಲಿ ಕಿರ್ಲೋಸ್ಕರ್

ಎಜ್ಯುಕೇಶನ್ ಟ್ರಸ್ಟಗೆ ಮಾರಾಟವಾದ ಜಮೀನನ್ನು ಸೇರಿಸಿ ಚೆಕ್ಕುಬಂದಿಯನ್ನು ನಮೂದಿಸಿದ್ದಾರೆ. ಆದರೆ ದಾವಾ ಸಲ್ಲಿಸುವಾಗ ಸದರಿ ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟಗೆ ಮಾರಾಟವಾದ ಜಮೀನನ್ನು ಡಿಕ್ರಿದಾರರ ಮಾವ ಬೀರಪ್ಪ ಮತ್ತು ಆತನ ಸಹೋದರ ನಾಗಪ್ಪನ ಹಿಸ್ಸೆಗೆ ಬಂದ ಒಟ್ಟು ಕ್ಷೇತ್ರ 10 ಎಕರೆ 7 ಗುಂಟೆ ಜಮೀನು ಎಂದು ವಿಭಾಗಪತ್ರದಲ್ಲಿ ತೋರಿಸಿದ್ದರು ಸಹ ಡಿಕ್ರಿದಾರರು ಆಕೆಯ ಮಾವ ಬೀರಪ್ಪನ ಹೆಸರಿನಲ್ಲಿರುವ ಪಹಣಿಪತ್ರಿಕೆ ಆಧಾರದ ಮೇಲೆ ಸ.ನಂ.32/ಪಿ ಯಲ್ಲಿ 4 ಎಕರೆ 5 ಗುಂಟೆ ಜಮೀನಿನಲ್ಲಿ ಭಾಗಾಂಶದ ಹಕ್ಕು ಕೊಡಿಸಬೇಕೆಂದು ಕೇಳಿದ್ದಾರೆ. ಆದರೆ ಚೆಕ್ಕುಬಂದಿಯಲ್ಲಿ ಮಾತ್ರ ಕಿರ್ಲೋಸ್ಕರ್ ಹೌಸಿಂಗ್ ಟ್ರಸ್ಟಗೆ ಭೂಸ್ವಾಧೀನವಾದ 1 ಎಕರೆ 38 ಗುಂಟೆ ಕ್ಷೇತ್ರವನ್ನು ಪಶ್ಚಿಮ ಕಡೆಗೆ ತೋರಿಸಿರುವುದಿಲ್ಲ. ಸದರಿ ಕಿರ್ಲೋಸ್ಕರ್ ಹೌಸಿಂಗ್ ಟ್ರಸ್ಟಗೆ ಹೊಂದಿಕೊಂಡು ಪೂರ್ವದ ಕಡೆಗೆ 4 ಎಕರೆ 5 ಗುಂಟೆ ಜಮೀನಿನ ಪೈಕಿ 1 ಎಕರೆ 20 ಗುಂಟೆ ಜಮೀನು 1 ಮತ್ತು 2ನೇ ಅರ್ಜಿದಾರರ ಮಾರಾಟಗಾರರಿಗೆ ನಿಶಾನೆ ಪಿ.1ರಂತೆ ದಿಃ26/08/1980 ರಂದು ಕ್ರಯಪತ್ರವಾಗಿದ್ದು, ದಿಃ05/09/1980 ರಂದು ಮ್ಯುಟೇಶನ್ ಆಗಿ ಸದರಿ ಜಮೀನು ಭೂಪರಿವರ್ತನೆಯಾಗಿ ನಿವೇಶನಗಳಾದ ಬಗ್ಗೆ ಡಿಕ್ರಿದಾರರು ಮೂಲ ದಾವೆ ನಂ.77/1995 ರಲ್ಲಿ ಪ್ರಸ್ತಾಪಿಸಿರುವುದಿಲ್ಲ ಮತ್ತು ಸದರಿ ಕ್ರಯಪತ್ರವನ್ನು ಈ ವರೆಗೂ ಪ್ರಶ್ನಿಸಿರುವುದಿಲ್ಲ. ಆದ್ದರಿಂದ ಡಿಕ್ರಿದಾರರ ಮಾವ ಬೀರಪ್ಪ ಮಾರಾಟ ಮಾಡಿದ 1 ಎಕರೆ 20 ಗುಂಟೆ ಜಮೀನಿನ ಕ್ರಯಪತ್ರ ನಿಶಾನೆ ಪಿ.1 ಬೀರಪ್ಪನ ಎಲ್ಲ ವಾರಸುದಾರರಿಗೆ ಬಂಧನಕಾರಿಯಾಗುತ್ತದೆ. ಡಿಕ್ರಿದಾರರು 4 ಎಕರೆ 5 ಗುಂಟೆ ಜಮೀನಿನ ಪೈಕಿ ಪೂರ್ವ ಭಾಗದ 1 ಎಕರೆ 20 ಗುಂಟೆ ಜಮೀನನ್ನು ಕಳೆದು ಉಳಿದ 2 ಎಕರೆ 25 ಗುಂಟೆ ಜಮಿನಿನಲ್ಲಿ ಮಾತ್ರ ಡಿಕ್ರಿದಾರರು ಮತ್ತು ತೀರ್ಪುಋಣಿಗಳು ಭಾಗಾಂಶವನ್ನು ಪಡೆಯಲು ಅರ್ಹರಿದ್ದಾರೆಂದು ನ್ಯಾಯಾಲಯದ ತೀರ್ಮಾನಕ್ಕೆ ಬಂದಿರುತ್ತದೆ. ಆದ್ದರಿಂದ ಅಂಶ ಸಂಖ್ಯೆಃ1ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

25. <u>ಅಂಶ-2</u> – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

## ಆದೇಶ

ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 21 ನಿಯಮ 99 ರಿಂದ 101 ಸಹ ಕಲಂ 47 ಮತ್ತು 151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರು ಸ.ನಂ.32/ಪಿ ಕ್ಷೇತ್ರ 4 ಎಕರೆ 5 ಗುಂಟೆ ಜಮೀನಿನ ಪಶ್ಚಿಮ ಭಾಗದ 1 ಎಕರೆ 20 ಗುಂಟೆ ಜಮೀನಿನಲ್ಲಿ ಆದ ನಿವೇಶನ ಸಂಖ್ಯೆ:17 ಮತ್ತು 21ರಲ್ಲಿ ಮಾಲೀಕತ್ವ ಮತ್ತು ಸ್ವಾಧೀನತೆಯ ಹಕ್ಕನ್ನು ಹೊಂದಿದ್ದಾರೆಂದು ಆದೇಶಿಸಲಾಗಿದೆ.

ಡಿಕ್ರಿದಾರರು ಅರ್ಜಿಯ ಐಟಂ ನಂ.2 ಸ.ನಂ.32 /ಪಿ ಒಟ್ಟು ಕ್ಷೇತ್ರ 4 ಎಕರೆ 5 ಗುಂಟೆ ಜಮೀನಿನ ಪೈಕಿ ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟ ಕಾಂಪೌಂಡ್ ನಿಂದ ಪೂರ್ವದ ಕಡೆಗೆ 1 ಎಕರೆ 20 ಗುಂಟೆ ಜಮೀನಿನಲ್ಲಿ ಬರುವ ನಿವೇಶನಗಳನ್ನು ಅಳತೆ ಮಾಡಿ, ಉಳಿದ ಪೂರ್ವದ ಕಡೆಗೆ ಬರುವ 2 ಎಕರೆ 25 ಗುಂಟೆ ಜಮೀನಿನಲ್ಲಿ ಡಿಕ್ರಿದಾರರಿಗೆ ಮತ್ತು ತೀರ್ಪುಋಣಿಗಳಿಗೆ ಮೂಲ ದಾವಾ ನಂ.77/1995 ಹಾಗೂ ಎಫ್.ಡಿ.ಪಿ.ನಂ.18/2002 ರ ಅಂತಿಮ ಡಿಕ್ರಿಯಂತೆ ಭಾಗಾಂಶ ಕೊಡಿಸಲು ಆದೇಶಿಸಲಾಗಿದೆ.

ಅರ್ಜಿಯ ಐಟಂ ನಂ.2 ಸರ್ವೆ ನಂ.32/ಪಿ ಆಸ್ತಿಗೆ ಸ್ವಾಧೀನತಾ ವಾರೆಂಟನ್ನು ಹೊರಡಿಸಲು ಆದೇಶಿಸಿದ್ದು, ನ್ಯಾಯಾಲಯದ ಬೇಲೀಫರು ತಾಲ್ಲೂಕು ಸರ್ವೆಯರ್ ಸಹಾಯದಿಂದ ಸರ್ವೆ ನಂ.32/ಪಿ ಕ್ಷೇತ್ರ 4 ಎಕರೆ 5 ಗುಂಟೆ ಜಮೀನಿನ ಪೈಕಿ ಕಿರ್ಲೋಸ್ಕರ್ ಎಜುಕೇಶನ್ ಟ್ರಸ್ಟ ಕಾಂಪೌಂಡ್ ನಿಂದ ಪೂರ್ವದ ಕಡೆಗೆ 1 ಎಕರೆ 20 ಗುಂಟೆ ಜಮೀನನ್ನು ಅಳತೆ ಮಾಡಿ, ಪೂರ್ವದ ಕಡೆ ಉಳಿದ 2 ಎಕರೆ 25 ಗುಂಟೆ ಜಮೀನಿನಲ್ಲಿ

ನ್ಯಾಯಾಲಯದ ಅಂತಿಮ ಡಿಕ್ರಿ ಪ್ರಕಾರ ಡಿಕ್ರಿದಾರರಿಗೆ ಸ್ವಾಧೀನತೆ ಕೊಡಿಸಲು ಆದೇಶಿಸಲಾಗಿದೆ.

ಮೇಲೆ ಹೇಳಿದಂತೆ ಡಿಕ್ರಿ ಬರೆಯಲು ಆದೇಶಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ.25ನೇ ಫೆಬ್ರವರಿ 2022 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-
(ಶಾರದಾದೇವಿ ಸಿ. ಹಟ್ಟಿ),
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.